SEVA BHARATHI
सेवा ही परमो धर्मः

ಸಂಪುಟ : 03
ಸಂಚಿಕೆ : 11

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ)
ಮಾಸಿಕ e-ನ್ಯೂಸ್ ಲೆಟರ್ – ಜನವರಿ 2023

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216

## ಸಿ.ಎಸ್.ಆರ್.ನಡಿ ಕೆಮ್ ಟ್ರೆಂಡ್ ಕೆಮಿಕಲ್ ಕಂಪನಿ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ನಿಂದ 5 ಲಕ್ಷ ದೇಣಿಗೆ




## ಉ.ಕ. ಜಿಲ್ಲೆಯ ಸಿರ್ಸಿಯಲ್ಲಿ 19ನೇ ಉಚಿತ 2 ದಿನಗಳ ವಸತಿಯುತ ಆರೋಗ್ಯ ತಪಾಸಣೆ, ಮಾಹಿತಿ ಮತ್ತು ತರಬೇತಿ ಶಿಬಿರ

## ಸಂಸ್ಥಾಪಕರಿಂದ ಸಮುದಾಯ ಭೇಟಿ

## ಉಡುಪಿ ಜಿಲ್ಲಾ ಭೇಟಿ

## ರಾಜ್ಯಸಭಾ ಸದಸ್ಯರ ಭೇಟಿ

## ಮೇಘ ಪಟವರ್ಧನ್ ವಿವಾಹದ ಶುಭ ಸಂದರ್ಭ ಸಂಸ್ಥೆಗೆ 25 ಸಾವಿರ ರೂಪಾಯಿ ದೇಣಿಗೆ

## ಎಲ್.ಐ.ಸಿ. ಗೋಲ್ಡನ್ ಜುಬಿಲಿ ಫೌಂಡೇಶನ್‌ನ ತಂಡ ಭೇಟಿ

## ಸ್ಫೂರ್ತಿದಾಯಕ ಬದುಕು ಕಟ್ಟಿಕೊಂಡ ಸಾಲು ಜೋಸೆಫ್

## ನಮ್ಮಿಂದಿಷ್ಟು

ಸಿರಸಿಯಲ್ಲಿ 19ನೇ ಶಿಬಿರ ನಡೆಯಿತು. ಶಿಬಿರವು ಯಶಸ್ಸು ಕಾಣಲು ರೋಟರಿ ಕ್ಲಬ್, ಇಂಡಿಯನ್ ಮೆಡಿಕಲ್ ಎಸೋಸಿಯೇಶನ್ ಹಾಗೂ ಸಿರಸಿ ಸ್ಕ್ಯಾನ್ ಸೆಂಟರ್‌ನ ಪ್ರಯತ್ನ ಅತ್ಯದ್ಭುತ ಮತ್ತು ಅವಿಸ್ಮರಣೀಯ ವಾಗಿತ್ತು. ನೊಂದಾಯಿತ ಫಲಾನುಭವಿಗಳನ್ನು ಕರಕೊಂಡು ಬರಲೇಬೇಕೆನ್ನುವ ಉದ್ದೇಶದಿಂದ ಅಂಬುಲೆನ್ಸ್‌ಗಳನ್ನು ಒದಗಿಸಿದ ಪರಿಣಾಮ 17 ಮಂದಿಯಲ್ಲಿ 15 ಮಂದಿ 2 ದಿನಗಳ ಶಿಬಿರದಲ್ಲಿ ಭಾಗವಹಿಸುವಂತಾಯಿತು. ಈ ಯಶಸ್ಸು ಆ ಸಂಸ್ಥೆಗಳಿಗೆ ಸಲ್ಲಬೇಕಿದೆ. ಆಯಾ ಫಲಾನುಭವಿಗಳು ಮುಂದಿನ ದಿನಗಳಲ್ಲಿ ಮುಖ್ಯವಾಹಿನಿ ಯಲ್ಲಿ ಸೇರಿಕೊಳ್ಳುವಂತಾಗಬೇಕೆಂಬುದೇ ನಮ್ಮ ಉದ್ದೇಶ.

ಬೆನ್ನುಹುರಿ ಅಪಘಾತದಿಂದಾದ ಅಂಗವಿಕಲತೆಯು ಇನ್ನು ಕೂಡಾ ಒಂದು ವಿಧದ ಅಂಗವಿಕಲತೆ ಎಂದು ಪರಿಗಣಿಸಲ್ಪಟ್ಟಿಲ್ಲದಿರುವುದು ದೊಡ್ಡ ದೌರ್ಭಾಗ್ಯ. ಈ ಮಾನ್ಯ ಪ್ರಧಾನಮಂತ್ರಿ ಮೋದಿಜಿ ಬಂದ ನಂತರ 13 ಅಂಗವಿಕಲತೆ ಇದ್ದದ್ದು 21 ರೀತಿಯ ಅಂಗವಿಕಲತೆ ಎಂದು ಪರಿಗಣಿಸಲ್ಪಟ್ಟಿತು. ಆದರೆ ಬೆನ್ನುಹುರಿ ಅಪಘಾತದ ಅಂಗವಿಕಲತೆ 22ನೇ ರೀತಿಯ ಅಂಗವಿಕಲತೆಯಾಗಬೇಕೆಂಬುದು ನಮ್ಮೆಲ್ಲರ ಆಶಯ.

ಈ ನಿಟ್ಟಿನಲ್ಲಿ ರಾಷ್ಟ್ರದಾದ್ಯಂತ ವಿವಿಧ ಸಂಘಟನೆ ಗಳು, ದಿವ್ಯಾಂಗರು ಕೇಂದ್ರ ಸರ್ಕಾರವನ್ನು ಒತ್ತಾಯಿಸು ತ್ತಲೇ ಬರುತ್ತಿದ್ದಾರೆ. ಜನಪ್ರತಿನಿಧಿಗಳಿಗೂ ಈ ಕಷ್ಟ ಕಾರ್ಪಣ್ಯಗಳು ಅರಿವಾದರೆ ಕೇಂದ್ರ ಸರ್ಕಾರ ಒಂದು ತೀರ್ಮಾನಕ್ಕೂ ಬರುವಂತಾಗುತ್ತದೆ. ನಮ್ಮ ರಾಜ್ಯಸಭಾ ಸದಸ್ಯರಾದ ಧರ್ಮಸ್ಥಳದ ಪೂಜ್ಯ ಡಾ। ಡಿ.ವೀರೇಂದ್ರ ಹೆಗ್ಗಡೆಯವರನ್ನು ನಾವು ಮತ್ತು ಎಪಿಡಿ ಸಂಸ್ಥೆಯ ಪ್ರತಿನಿಧಿಗಳೊಂದಿಗೆ ಭೇಟಿ ಮಾಡಿರುವ ಬಗ್ಗೆ ಪ್ರಯತ್ನಿಸು ವಂತೆ ಭಿನ್ನವಿಸಿಕೊಂಡಿರುವುದು ಗಮನಾರ್ಹ ಹೆಜ್ಜೆ ಯಾಗಿದೆ.

ಸರಕಾರದ ಆದೇಶದಂತೆ ಮಂಜೂರಾದ ಭೂಮಿಯ ದಾಖಲೆ ಪತ್ರಗಳು ಕೈಸೇರುವ ಹಂತ ಹತ್ತಿರದಲ್ಲಿದೆ. ಮತ್ತೊಂದು ದೊಡ್ಡ ಕನಸುಗಳೊಂದಿಗೆ ಅವಿರತ ಶ್ರಮದ ಮೂಲಕ ಒಂದು ಸ್ವಂತ ಕೇಂದ್ರ ನಿರ್ಮಾಣವಾಗಬೇಕಾಗಿದೆ. ಎಲ್ಲವೂ ದೈವಾನುಗ್ರಹ ಮತ್ತು ದೇವರ ಕೃಪೆ.

॥ ಸೇವಾಹಿ ಪರಮೋ ಧರ್ಮಃ ॥

**ಇತೀ ತಮ್ಮವ,**
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–॥
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಜಿಲ್ಲಾ ಕಚೇರಿ :**

ಸೇವಾನಿಕೇತನ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ
ಹೆರ್ಗ, ಉಡುಪಿ ತಾಲೂಕು – 576 107
ಮೊ.: 9606044893

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

ಶ್ರೀ ಕೆ. ವಿನಾಯಕ ರಾವ್ – ಅಧ್ಯಕ್ಷರು
ಶ್ರೀ ಕೆ. ಯು. ಗಿರೀಶ್ ರಾವ್ – ಉಪಾಧ್ಯಕ್ಷರು
ಶ್ರೀಮತಿ ಸ್ವರ್ಣಗೌರಿ – ಕಾರ್ಯದರ್ಶಿ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ – ಖಜಾಂಚಿ
ಶ್ರೀ ಕೆ. ಬಾಲಕೃಷ್ಣ – ಟ್ರಸ್ಟಿ

## ಸಲಹಾ ಮಂಡಳಿ

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಶ್ರೀಮತಿ ಮನೋರಮ ಭಟ್
ಶ್ರೀ ಉದಯಶಂಕರ್
ಶ್ರೀ ಹರೀಶ್ ಟಿ. ಪಿ.
ಶ್ರೀ ಗೋಪಾಲ ಕೆ. ವಿ.
ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ
ಶ್ರೀಮತಿ ಜೊಯ್ಸ್ ಪಿರೇರಾ

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

## ನಿರ್ದೇಶಕರು

ಶ್ರೀ ರಾಯನ್ ಫೆರ್ನಾಂಡಿಸ್
ಶ್ರೀ ವಿಜಯ ಕೊಡವೂರು
ಡಾ. ಮುರಳೀಧರ ನಾಯಕ್

# ಉ.ಕ. ಜಿಲ್ಲೆಯ ಸಿರ್ಸಿಯಲ್ಲಿ 19ನೇ ಉಚಿತ 2 ದಿನಗಳ ವಸತಿಯುತ
# ಆರೋಗ್ಯ ತಪಾಸಣೆ, ಮಾಹಿತಿ ಮತ್ತು ತರಬೇತಿ ಶಿಬಿರ




ಜನವರಿ 17 & 18 ರಂದು 2 ದಿನಗಳ ಉಚಿತ ಆರೋಗ್ಯ ತಪಾಸಣೆ ಮತ್ತು ಮಾಹಿತಿ, ತರಬೇತಿ ಶಿಬಿರವನ್ನು ವಿಧಾನಪರಿಷತ್ ಶಾಸಕರಾದ ಶಾಂತಾರಾಮ ಸಿದ್ಧಿಯವರು ಉದ್ಘಾಟಿಸಿ, ಬೆನ್ನುಹುರಿ ಅಪಘಾತಗೊಂಡ ದಿವ್ಯಾಂಗರಿಗೆ ಮುಂದಿನ ದಿನಗಳಲ್ಲಿ ಸರಕಾರದಿಂದ ಬೇಕಾಗುವ ಸೌಲಭ್ಯಗಳನ್ನು ಒದಗಿಸಿಕೊಡುವುದರ ಮೂಲಕ ಅವರನ್ನು ಮುಖ್ಯವಾಹಿನಿಗೆ ತರಲು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆಂದು ಭರವಸೆಯಿತ್ತರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷರಾದ ಕೆ.ವಿನಾಯಕ ರಾವ್ ಮಾತನಾಡಿ ದಿವ್ಯಾಂಗರು ಎದುರಿಸುವ ಸಮಸ್ಯೆಗಳು, ಅದರ ನಿರ್ವಹಣೆ, ಸರಕಾರ ಮಾಡಬೇಕಿರುವ ಸೌಕರ್ಯಗಳು, ದಾನಿಗಳ ಅನಿವಾರ್ಯತೆ ಮತ್ತು ಆ ಕುಟುಂಬದ ಬಗ್ಗೆ ಗಮನಸೆಳೆದು ಕೂಲಂಕುಷ ತಿಳಿದು ಸ್ಪಂದಿಸಬೇಕಾದ ಅನಿವಾರ್ಯತೆ ಇಡೀ ಸಮಾಜಕ್ಕೆ ಇದೆ ಎಂದು ತಿಳಿಸಿದರು. ರೋಟರಿ ಕ್ಲಬ್‌ನ ಅಧ್ಯಕ್ಷರಾದ ಸ್ಕ್ಯಾನ್ ಸೆಂಟರ್‌ನ ರೋ। ಡಾ। ವಿನೇಶ್ ಹೆಗ್ಡೆ, ಸಿರಿಸಿಯ ಇಂಡಿಯನ್ ಮೆಡಿಕಲ್ ಅಸೋಸಿಯೇಶನ್‌ನ ಡಾ। ರಾಮ್‌ಹೆಗ್ಡೆ, ತಾಲೂಕು ಆರೋಗ್ಯಾಧಿಕಾರಿ ಡಾ। ವಿನಾಯಕ ಭಟ್, ಸಿರ್ಸಿಯ ಸಿಡಿಪಿಒ ದತ್ತಾತ್ರೇಯ ಭಟ್, ಮಹೇಶ್ ತೆಲಂಗ್ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ 15 ಫಲಾನುಭವಿಗಳು ಭಾಗವಹಿಸಿದ್ದು 6 ಗಾಲಿಕುರ್ಚಿ, 2 ವಾಟರ್‌ಬೆಡ್, 1 ಏರ್‌ಬೆಡ್, 7 ಮೆಡಿಕಲ್ ಕಿಟ್, 2 ಸೆಲ್ಫ್‌ಕಿಟ್‌ಗಳನ್ನು ವಿತರಿಸಲಾಯಿತು.

2 ದಿನಗಳ ಕಾಲ ನಡೆದ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಸಂಸ್ಥೆಯ ಕೆ.ವಿನಾಯಕ ರಾವ್, ರಾಯನ್ ಫೆರ್ನಾಂಡಿಸ್, ತಾಲೂಕು ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತೆಯಾದ ಸ್ನೇಹ ನಾಯ್ಕ್, ಫಿಸಿಯೋಥೆರಪಿಸ್ಟ್ ಆದ ಕಮಲ್ ಪಟೇಲ್ ಭಾಗವಹಿಸಿದ್ದರು. 2ನೇ ದಿನದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ತಾಲೂಕು ಆರೋಗ್ಯಾಧಿಕಾರಿ ಉಪಸ್ಥಿತರಿದ್ದರು.

ಸೇವಾಭಾರತಿ ಇದರ ಆಶ್ರಯದಲ್ಲಿ ನಡೆದ ಶಿಬಿರಕ್ಕೆ ರೋಟರಿ ಕ್ಲಬ್ ಸಿರ್ಸಿ, ಸಿರ್ಸಿಯ ಇಂಡಿಯನ್ ಮೆಡಿಕಲ್ ಎಸೋಸಿಯೇಶನ್ (ಐಎಮ್‌ಎ), ಸಿರ್ಸಿ ಸ್ಕ್ಯಾನ್ & ಡಯಾಗ್ನಸ್ಟಿಕ್ ರಿಸರ್ಚ್ ಸೆಂಟರ್ ಹಾಗೂ ಬೆಂಗಳೂರಿನ ಎಪಿಡಿ ಸಂಸ್ಥೆಗಳು ಸಹಭಾಗಿತ್ವ ನೀಡಿತ್ತು.

## ದಾನಿಗಳು



ದಿ। 01.01.2023 ರಂದು ನಮ್ಮ ಸಂಸ್ಥೆಯ ಹಿತೈಷಿ ದಂಪತಿ ಶ್ರೀಮತಿ ಮತ್ತು ಶ್ರೀ ಯಶವಂತ್ ಪಟವರ್ಧನ್‌ರವರ ಮಗಳಾದ ಮೇಘ ಇವರ ವಿವಾಹದ ಶುಭ ಸಂದರ್ಭದಲ್ಲಿ ಸಂಸ್ಥೆಗೆ 25 ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿ ನೀಡಿದರು. ಕೊಡುಗೆಯನ್ನು ಸ್ವೀಕರಿಸಿದ ಸಂಸ್ಥೆಯ ಅಧ್ಯಕ್ಷರಾದ ವಿನಾಯಕ ರಾವ್ ನೂತನ ದಂಪತಿಗಳಿಗೆ ಶುಭ ಹಾರೈಸಿದರು.





ನಮ್ಮ ಸಂಸ್ಥೆಯ ಸಿಬ್ಬಂದಿಯಾದ ಶ್ರೀಮತಿ ಪುಷ್ಪಲತಾ ಇವರ ಪ್ರಥಮ ವೈವಾಹಿಕ ದಿನ ಶುಭ ಸಮಯಕ್ಕೆ ಸೇವಾಧಾಮಕ್ಕೆ ತನ್ನ ಪತಿ ಧರ್ಮಸ್ಥಳ ಕೃಷಿಪತ್ತಿನ ಸಂಘದ ನಿರ್ದೇಶಕರಾದ ವಿಕ್ರಮ್‌ರೊಂದಿಗೆ ಆಗಮಿಸಿ ಸನಿವಾಸಿಗಳೊಂದಿಗೆ ಸಂಭ್ರಮವನ್ನು ಆಚರಿಸಿಕೊಂಡರು. ಉತ್ತರಕನ್ನಡ ಜಿಲ್ಲೆಯಲ್ಲಿರುವ ಬಡತನದಲ್ಲಿ ಜೀವನ ಸಾಗಿಸುತ್ತಿರುವ ಬೆನ್ನುಹುರಿ ಅಪಘಾತಗೊಂಡ ದಿವ್ಯಾಂಗರ ಪುನಃಶ್ಚೇತನ ವೆಚ್ಚಕ್ಕಾಗಿ ರೂಪಾಯಿ 10 ಸಾವಿರ ಮತ್ತು ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ರೂಪಾಯಿ 10 ಸಾವಿರ ದೇಣಿಗೆ ನೀಡಿದರು. ದೇಣಿಗೆ ಸ್ವೀಕರಿಸಿದ ಸಂಸ್ಥೆಯ ಅಧ್ಯಕ್ಷರಾದ ಕೆ.ವಿನಾಯಕ ರಾವ್ ದಂಪತಿಗಳ ಉತ್ತರೋತ್ತರ ಶ್ರೇಯಸ್ಸಿಗಾಗಿ ಶುಭ ಹಾರೈಸಿದರು.

## ಜನವರಿ ತಿಂಗಳಿನಲ್ಲಿ ದೇಣಿಗೆ ನೀಡಿದ ಸಂಘ ಸಂಸ್ಥೆಗಳು

ಕೆಮ್ ಟ್ರೆಂಡ್ ಕೆಮಿಕಲ್ಸ್ ಕಂಪೆನಿ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಚಿತ್ಪಾವನ ಬ್ರಾಹ್ಮಣರ ಬಳಗ, ಉಜಿರೆ
ಅನಂತ ಫಡ್ಕೆ ಮೆಮೋರಿಯಲ್ ಸೋಶಿಯಲ್ ವೆಲ್ಫೇರ್ ಟ್ರಸ್ಟ್, ಮುಂಡಾಜೆ
ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ, ಬೆಂಗಳೂರು

## ಮಹನೀಯ ದಾನಿಗಳು

ಶ್ರೀ ಯಶ್ವಂತ್ ಪಟವರ್ಧನ್
ಶ್ರೀ ವಿಕ್ರಮ್, ಧರ್ಮಸ್ಥಳ
ಶ್ರೀಮತಿ ವಿಜಯಾ ಪಿ, ಪುತ್ತೂರು
ಶ್ರೀ ದಿನೇಶ್
ಶ್ರೀ ಜಿ ಎಸ್ ನಟೇಶ್, ಶಿವಮೊಗ್ಗ
ಶ್ರೀ ಸಿ ಆರ್ ಮುರಳಿ, ಬೆಂಗಳೂರು
ಶ್ರೀ ಹರಿಪ್ರಸಾದ್ ಎನ್ ಎಸ್, ಬೆಂಗಳೂರು
ಶ್ರೀ ನರಸಿಂಹಯ್ಯ, ಮಂಗಳೂರು
ಕುಮಾರಿ ಅಫೀಫ, ಕುಮಟಾ
ಶ್ರೀ ಸಂದೀಪ್ ಪಿ ಹೆಚ್, ಬೆಂಗಳೂರು
ಶ್ರೀಮತಿ ಎಸ್ ಆರ್ ಸಿಂಧ್ಯಾ, ಬೆಂಗಳೂರು

## ಸೇವಾನಿಧಿ ದಾನಿಗಳು

ಶ್ರೀ ಮಧ್ವಮೂರ್ತಿ ಎಂ, ಉಡುಪಿ
ಶ್ರೀ ಕೆ ವಿನಾಯಕ ರಾವ್, ಕನ್ಯಾಡಿ
ಶ್ರೀ ಉದಯಶಂಕರ್ ಕೆ, ಬೆಳ್ತಂಗಡಿ
ಶ್ರೀ ವೆಲೇರಿಯನ್ ಡಲ್ಮೈಡಾ, ಮಂಗಳೂರು
ಶ್ರೀ ಸೂರ್ಯನಾರಾಯಣ ರಾವ್, ದೊಂಡೋಲೆ
ಶ್ರೀ ರಾಮದಾಸ್ ಭಂಡಾರ್ಕರ್,ಉಜಿರೆ
ಶ್ರೀ ಗುರುರಾಜ್, ಕನ್ಯಾಡಿ
ಶ್ರೀ ಜಿ ವಿಜಯ ಗೌಡ, ಉಜಿರೆ
ಶ್ರೀ ಶ್ರೀಧರ ಕೆ ವಿ, ಉಜಿರೆ
ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
ಡಾ. ರಾಮಕೃಷ್ಣ ಭಟ್ ಜಿ ಎನ್, ಕನ್ಯಾಡಿ
ಶ್ರೀ ಕಾರ್ತಿಕ್, ನೇತ್ರಾವತಿ
ಶ್ರೀಮತಿ ಬಬಿತಾ, ಕನ್ಯಾಡಿ
ಶ್ರೀ ಬಿ ಕೃಷ್ಣಪ್ಪ ಗುಡಿಗಾರ್, ಕಲ್ಮಂಜ
ಶ್ರೀಮತಿ ಛಾಯಾ ಸಿ ಎಸ್, ಉಜಿರೆ
ಶ್ರೀ ಶಿವಕುಮಾರ, ಹಳೇಪೇಟೆ ಉಜಿರೆ
ಶ್ರೀ ಮಧುಸೂದನ್, ಉಜಿರೆ
ಶ್ರೀ ದೇವದಾಸ್ ಪ್ರಭು, ಕನ್ಯಾಡಿ
ಶ್ರೀ ರಜತ್ ಕುಮಾರ್ ಜೆ ಡಿ, ವೇಣೂರು
ಶ್ರೀ ಜಯಾನಂದ ಎಂ, ಕನ್ಯಾಡಿ
ಶ್ರೀ ಬಿ ಪುರಂದರ ನಾರ್ಯ, ಧರ್ಮಸ್ಥಳ

## ಸಿ.ಎಸ್.ಆರ್.ನಡಿ ಕೆಮ್ ಟ್ರೆಂಡ್ ಕೆಮಿಕಲ್ ಕಂಪನಿ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ನಿಂದ 5 ಲಕ್ಷ ದೇಣಿಗೆ

ಬೆಂಗಳೂರಿನ ಕೆಮ್ ಟ್ರೆಂಡ್ ಕೆಮಿಕಲ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಸತತವಾಗಿ ಮೂರು ವರ್ಷಗಳಿಂದ ನಮ್ಮ ಸಂಸ್ಥೆಗೆ ಬೆಂಬಲಿಸುತ್ತಾ ಬರುತ್ತಿದೆ. ಕಂಪನಿಯು ಸಿ.ಎಸ್.ಆರ್. ಯೋಜನೆಯಡಿ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ರಾಂಪ್‌ನೊಂದಿಗೆ ಸ್ಟೇರ್ ಕೇಸ್, ಟ್ರೆಡ್ ಮಿಲ್, 5 ಹಾಸಿಗೆ, ಎಡಿಎಲ್ ಬೋರ್ಡ್, ಯುನಿವರ್ಸಲ್ ಕಫ್ ಸೆಂಟರ್, ಪ್ರೊಜೆಕ್ಟರ್, ತೇವಾಂಶದ ಶಾಖ ಘಟಕ, ಪೇಸರ್ ಗ್ರೈಟ್ ಟ್ರೈನರ್, 5 ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳಿಗೆ ವಾಟರ್ ಬೆಡ್ ಮತ್ತು ಏರ್‌ಬೆಡ್ ಹಾಗೂ 4 ಗಾಲಿ ಕುರ್ಚಿಗಳನ್ನು ವಿತರಿಸಲು 5 ಲಕ್ಷ ದೇಣಿಗೆಯನ್ನು ನೀಡಿರುತ್ತಾರೆ. ಕಂಪನಿ ಸಿಇಒ ಆದ ರಾಜೇಶ್ ಫಡ್ಕೆ ಹಾಗೂ ತಂಡಕ್ಕೆ ಸಂಸ್ಥೆಯು ಆಭಾರಿಯಾಗಿರುತ್ತದೆ.

## ಕೇಂದ್ರಕ್ಕೆ ಭೇಟಿ

### ನಟೇಶ್ ಸೇವಾಧಾಮಕ್ಕೆ ಭೇಟಿ

ದಿ। 23.01.2023 ರಂದು ಶಿವಮೊಗ್ಗದ ನಿವೃತ್ತ ಪ್ರೊಫೆಸರ್ ಶಿಗ್ಗ ಖ್ಯಾತಿಯ ನಟೇಶ್‌ರವರು ಸೇವಾಧಾಮಕ್ಕೆ ಭೇಟಿ ನೀಡಿ ಕಾರ್ಯಚಟುವಟಿಕೆಗಳಿಗೆ ಮೆಚ್ಚುಗೆ ಸೂಚಿಸಿ ದೇಣಿಗೆಯಾಗಿ ರೂಪಾಯಿ 5000/– ನೀಡಿದರು.




ದಿನಾಂಕ 29.01.2023 ರಂದು ಮುಂಡಾಜೆಯ ಆನಂದಫಡ್ಕೆ ಮೆಮೊರಿಯಲ್ ಸೋಶಿಲ್ ವೆಲ್‌ಫೇರ್ ಸೇವಾಟ್ರಸ್ಟ್ ಇದರ ಪ್ರಹ್ಲಾದ್ ಫಡ್ಕೆ ದಂಪತಿಯವರು ಸೇವಾಧಾಮಕ್ಕೆ ಭೇಟಿ ನೀಡಿ ಕಾರ್ಯಚಟುವಟಿಕೆಗಳನ್ನು ತಿಳಿದುಕೊಂಡು ರೂಪಾಯಿ 10 ಸಾವಿರದ ಚೆಕ್‌ನ್ನು ನೀಡಿದರು.



ದಿನಾಂಕ 31.01.2023 ರಂದು ನಮ್ಮ ಸಂಸ್ಥೆಯ ಹಿತೈಷಿಗಳಾದ ಸಿ.ಆರ್.ಮುರಳಿ ದಂಪತಿಯವರು ಕೇಂದ್ರ ಭೇಟಿ, ಕಾರ್ಯಚಟುವಟಿಕೆಗಳಿಗೆ ಮೆಚ್ಚುಗೆ ಸೂಚಿಸಿ ರೂ. 5000/– ದೇಣಿಗೆ ನೀಡಿದರು.



ದಿ। 14.01.2023 ರಂದು ಕೆ.ಎಂ.ಸಿ. ಮಣಿಪಾಲದ ಪಿಎಂಆರ್ ವಿಭಾಗದ ಡಾ। ಮೈತ್ರೇಯಿಯವರು ಸೇವಾಧಾಮಕ್ಕೆ ತಿಂಗಳ ಭೇಟಿ ನಿಮಿತ್ತ ಆಗಮಿಸಿ ದಾಖಲಾದ ಮಂದಿ ಸನಿವಾಸಿಗಳ ಆರೋಗ್ಯ ತಪಾಸಣೆ ನಡೆಸಿ, ಉಪಯುಕ್ತ ಸಲಹೆ ನೀಡಿದರು.



ದಿ। 13.01.2023 ಉಜಿರೆಯ ತಾಲೂಕು ಚಿತ್ಪಾವನ ಬ್ರಾಹ್ಮಣರ ಬಳಗವು ಸೇವಾನಿಕೇತನಕ್ಕೆ ಭೇಟಿ ನೀಡಿ ಸೇವಾಭಾರತಿಯ ಕಾರ್ಯಚಟುವಟಿಕೆಗಳನ್ನು ಅರಿತು ಸೇವಾಕಾರ್ಯಗಳಿಗೆ ರೂಪಾಯಿ 20,000/–ದ ಚೆಕ್‌ನ್ನು ದೇಣಿಗೆಯಾಗಿ ನೀಡಿತು. ತಂಡದಲ್ಲಿ ಬಳಗದ ಗೌರವಾಧ್ಯಕ್ಷರಾದ ಶಂಕರ ಪಟವರ್ಧನ, ಅಧ್ಯಕ್ಷರಾದ ಯೋಗೀಶ್ ಬಿಡೆ, ಕಾರ್ಯದರ್ಶಿ ಗಣೇಶ್ ಶೆಂಡ್ಯೆ, ಖಜಾಂಚಿಯಾದ ಶ್ರೀಕಾಂತ್ ಗೋರೆ ಉಪಸ್ಥಿತರಿದ್ದರು.




ದಿನಾಂಕ 31.01.2023 ಉಪ್ಪಿನಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಡಾ. ನಂದೀಶ್ ವೈ.ಡಿ., ಸಹಾಯಕ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸೇವಾಧಾಮಕ್ಕೆ ಭೇಟಿ ನೀಡಿದರು.

## ನಮ್ಮ ಭೇಟಿ

### ಸಂಸ್ಥಾಪಕರಿಂದ ಸಮುದಾಯ ಭೇಟಿ




ದಿ| 08.01.2023 ರಂದು ಉತ್ತರ ಕನ್ನಡ ಜಿಲ್ಲೆಯ ಪ್ರಯಾಣದಲ್ಲಿ ಈ ಕೆಳಕಂಡ ಉಡುಪಿ ಹಾಗೂ ಶಿವಮೊಗ್ಗ ಜಿಲ್ಲೆಯ ನಿವಾಸಿಯಾಗಿ ಬೆನ್ನುಹುರಿ ಅಪಘಾತಗೊಂಡ ದಿವ್ಯಾಂಗರ ಮನೆಗೆ ಭೇಟಿಯಿತ್ತು. ಅವರಿಗೆ ವಿಶ್ವಾಸ ತುಂಬಿ, ಆರೋಗ್ಯದ ಬಗ್ಗೆ ವಿಚಾರ ವಿನಿಮಯ ನಡೆಸಿ ದ್ವಿತೀಯಾಂತರ ಸಮಸ್ಯೆಗಳ ನಿರ್ವಹಣೆ ಬಗ್ಗೆ ಮಾರ್ಗದರ್ಶನ ನೀಡಿದರು.

ಚಿತ್ರ : ಶಿವಮೊಗ್ಗ ಜಿಲ್ಲೆಯ ಅರಳಸುರುಳಿಯ ಅಶೋಕ್
ಶಿವಮೊಗ್ಗ ಜಿಲ್ಲೆಯ ಹೆಗ್ಗೋಡಿನ ನವೀನ್
ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಆನಂದ್
ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ವಾಸು ಮರಕಳ
ಉಡುಪಿ ಜಿಲ್ಲೆಯ ಅಂಡಾರು ಗ್ರಾಮದ ಸಚಿನ್ ನಾಯ್ಕ
ಶಿವಮೊಗ್ಗ ಜಿಲ್ಲೆಯ ಸಾಗರದ ಪ್ರಮೋದ್

### ರಾಜ್ಯಸಭಾ ಸದಸ್ಯರ ಭೇಟಿ

ನಮ್ಮ ಸಮಿತಿಯು ನಮ್ಮ ಸಂಸ್ಥೆ ಹಾಗೂ ಎಪಿಡಿ ಸಂಸ್ಥೆಯ ಪ್ರತಿನಿಧಿಗಳನ್ನೊಳಗೊಂಡಂತೆ ರಾಜ್ಯಸಭಾ ಸದಸ್ಯರಾದ ಪೂಜ್ಯ ಡಾ. ಡಿ.ವೀರೇಂದ್ರ ಹೆಗ್ಗಡೆಯವರನ್ನು ಭೇಟಿ ನೀಡಿ ಬೆನ್ನುಹುರಿ ಅಪಘಾತವನ್ನು ಪ್ರತ್ಯೇಕ ಅಂಗವಿಕಲತೆಯನ್ನಾಗಿ ಪರಿಗಣಿಸುವಂತೆ ಮತ್ತು ಇತರೇ ವಿಶೇಷ ಸೌಲಭ್ಯಗಳನ್ನು ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಡ ನೀಡಲು ಮನವಿ ಸಲ್ಲಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಕೆ.ವಿನಾಯಕ ರಾವ್, ಕಾರ್ಯದರ್ಶಿ ಸ್ವರ್ಣಗೌರಿ ಸಿಬ್ಬಂದಿಗಳಾದ ಚರಣ್ ಕುಮಾರ್, ಆಶ್ರಿತ್ ಸಿ.ಪಿ. ಮತ್ತು ಎಪಿಡಿ ಸಂಸ್ಥೆಯ ಹೆಲ್ತ್ ಡೈರೆಕ್ಟರ್ ಆದ ನಿಶಾದ್ ಹಾಗೂ ಮ್ಯಾನೇಜರ್ ಆಪರೇಶನ್, ಹೆಲ್ತ್ & ರಿಹಾಬ್ ಮೆನೇಜರ್ ಉಮೇಶ್‌ರವರು ತಂಡದಲ್ಲಿ ಭಾಗವಹಿಸಿದ್ದರು.

## ಸೇವಾ ಸಂಗಮ

## ಆನ್‌ಲೈನ್ ಕಾರ್ಯಗಾರ




ಜನವರಿ ತಿಂಗಳ ಸೇವಾ ಸಂಗಮದ ಆನ್‌ಲೈನ್ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ| ರಾಜೇಶ್ ನಾವುಡ ಜಿ.ವಿ.ಯವರು ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಫಿಸಿಯೋಥೆರಪಿಯಲ್ಲಿ ಧೀರ್ಘಕಾಲಿನ ಪುನಶ್ಚೇತನ ಚಿಕಿತ್ಸೆ ವಿಷಯವಾಗಿ ಮಾತನಾಡಿದರು. ಈ ಕಾರ್ಯಗಾರದಲ್ಲಿ 42 ಮಂದಿ ಪ್ರಯೋಜನ ಪಡೆದುಕೊಂಡರು.

### ಉಡುಪಿ ಜಿಲ್ಲಾ ಭೇಟಿ



ದಿನಾಂಕ 30.01.2023 ರಂದು ನಮ್ಮ ಸಮಿತಿಯು ಉಡುಪಿ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಕಾಪು ಶಾಸಕರಾದ ಲಾಲಾಜಿ ಮೆಂಡನ್‌ರವರ ಉಸ್ತುವಾರಿಯಲ್ಲಿ ಜಿಲ್ಲಾಧಿಕಾರಿ ಕೂರ್ಮಾ ರಾವ್ ಎಮ್. ಹಾಗೂ ಜಿಲ್ಲಾ ಕಾರ್ಯನಿರ್ವಹಣಾಧಿಕಾರಿ ಪ್ರಸನ್ನ ಹೆಚ್. ರವರೊಂದಿಗೆ ಕೊರಂಗ್ರಪಾಡಿ ಶಾಲೆಯ ಹಸ್ತಾಂತರ ವಿಷಯವಾಗಿ ಮಾತುಕತೆ ನಡೆಸಲಾಯಿತು.

*The world worries about disability more than disabled people do*

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಮೆಡಿಕಲ್ ಕಿಟ್‌ಗಳು.

ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

## ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ದಿನದ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

## ಎಲ್.ಐ.ಸಿ. ಗೋಲ್ಡನ್ ಜುಬಿಲಿ ಫೌಂಡೇಶನ್‌ನ ತಂಡ ಭೇಟಿ



ದಿನಾಂಕ 07.01.2023, ಎಲ್‌ಐಸಿಯ ರೀಜನಲ್ ಮೆನೇಜರ್ ಆದ ದೊಡ್ಮನಿ ಹಾಗೂ ಬೆಳ್ತಂಗಡಿ ಶಾಖಾ ಪ್ರಬಂಧಕರಾದ ಪಿ.ಎಸ್.ಕುಮಾರ್ ಮತ್ತು ಡೆವಲಪ್‌ಮೆಂಟ್ ಆಫೀಸರ್ ಉದಯ ಶಂಕರ್‌ರವರ ತಂಡವು ಸೇವಾಧಾಮಕ್ಕೆ ಭೇಟಿ ನೀಡಿತು. ಸಂಸ್ಥೆಗೆ ಎಲ್.ಐ.ಸಿ. ಗೋಲ್ಡನ್ ಫೌಂಡೇಶನ್ ನೀಡಿದ ಸೋಲಾರ್ ಘಟಕವನ್ನು ಸ್ಥಿತಿಗತಿಯನ್ನು ಪರಿಶೀಲಿಸಿ ನಿರ್ವಹಣೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

## Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

# ಬೆನ್ನುಹುರಿ ಅಪಘಾತಕ್ಕೆ ಒಳಗಾಗಿ ಸ್ಪೂರ್ತಿದಾಯಕ ಬದುಕು ಕಟ್ಟಿಕೊಂಡ ಸಾಲು ಜೋಸೆಫ್, ನೆರಿಯ

ಯಶೋಗಾಥೆ





"ಬದುಕಲು ಸಾಧ್ಯವಿಲ್ಲ, ನನ್ನ ಕೈಲಾಗುವ ಯಾವುದಾದರೂ ಕೆಲಸ ಮಾಡಲೇಬೇಕು" ಎಂದು ಛಲ ಇಟ್ಟುಕೊಂಡು ತಮಗೆ ತಿಳಿದಿರುವ ಕೃಷಿ ವೃತ್ತಿಯನ್ನೇ ಮುಂದುವರೆಸಿಕೊಂಡು ಹೋಗಲು ನಿರ್ಧರಿಸಿ ಹೊಸ ಬದುಕು ರೂಪಿಸುವ ಸಲುವಾಗಿ ಕುಟುಂಬ ಸಮೇತರಾಗಿ ದಕ್ಷಿಣ ಕನ್ನಡದ ಬೆಳ್ತಂಗಡಿ ತಾಲೂಕಿನ ನೆರಿಯಕ್ಕೆ ವಲಸೆ ಬಂದು ಅಲ್ಲೇ ಸಾಲ ಮಾಡಿ 2 ಎಕರೆ ಜಮೀನು ಖರೀದಿ ಮಾಡಿ ಕಷ್ಟ ಪಟ್ಟು ದುಡಿದರು. ತಮ್ಮ ದೌರ್ಬಲ್ಯಗಳನ್ನೆಲ್ಲಾ ಬದಿಗೆ ಇಟ್ಟು ಅಚ್ಚು ಕಟ್ಟಾಗಿ ಕೆಲಸಗಳನ್ನು ತಾವೇ ಮಾಡುತ್ತಾ ತಮ್ಮ ಜೀವನ ನಡೆಸಿಕೊಂಡು ಹೋಗುತ್ತಿರುವ ಸಾಲು ಜೋಸೆಫ್ ಎಂತಹವರಿಗೂ ಸ್ಪೂರ್ತಿಯಾಗುತ್ತಾರೆ.

"ಕಷ್ಟ ಬಂದಾಗ ಬದುಕಿಗೆ ಬೆನ್ನು ತೋರಿಸಿ ಓಡಿ ಹೋಗುವವರೇ ಹೆಚ್ಚು. ಅದರ ಬದಲು ಆತ್ಮವಿಶ್ವಾಸದಿಂದ ಪರಿಸ್ಥಿತಿಯನ್ನು ಎದುರಿಸಿದರೆ ಎಂತಹ ಕಷ್ಟಗಳು ಕೂಡ ಕರಗಿ ಹೋಗುತ್ತದೆ ಎನ್ನುವುದಕ್ಕೆ ಸಾಕ್ಷಿಯಾಗಿದ್ದಾರೆ ಸಾಲು ಜೋಸೆಫ್". ಇವರಿಗೆ ತಮ್ಮ ಕಾಲುಗಳ ಮೇಲೆ ನಿಂತು ಕೊಳ್ಳಲು ಶಕ್ತಿ ಇಲ್ಲ, ಆದರೂ ಇವರು ಮಾಡುತ್ತಿರುವ ಕೃಷಿ ಕೆಲಸ ಎಂತಹವರನ್ನೂ ಬೆರಗುಕಣ್ಣಿನಿಂದ ನೋಡುವಂತೆ ಮಾಡದೇ ಇರದು.

ಸಾಲು ಜೊಸೆಫ್ ಅವರು ಮೂಲತಃ ಕೇರಳದ ಮಲ್ಲಾಪುರಂ ನವರಾಗಿದ್ದು ಸಾಮಾನ್ಯ ಜೀವನವನ್ನು ನಡೆಸುತ್ತಿದ್ದರು. ಆದರೆ 1989 ರಲ್ಲಿ ಕಾಳು ಮೆಣಸು ಕೊಯ್ಯುತ್ತ ಇದ್ದ ಸಂದರ್ಭದಲ್ಲಿ ಮರದಿಂದ ಬಿದ್ದು ಬೆನ್ನುಹುರಿ ಅಪಘಾತಕ್ಕೆ ಒಳಗಾಗುತ್ತಾರೆ.

ಬದುಕುವುದೇ ಕಷ್ಟವಾಗಿದ್ದ ಸಂದರ್ಭವದು. ಮನೆಯವರು ಹೇಗಾದರೂ ಬದುಕಿದರೆ ಸಾಕು ಎನ್ನುವ ಸಮಯಕ್ಕೆ ಅವರು ಸಾವನ್ನು ಗೆದ್ದು ಬರುತ್ತಾರೆ. ಆದರೆ ತಮ್ಮ ಎರಡೂ ಕಾಲುಗಳ ಸ್ವಾಧೀನ ಕಳೆದುಕೊಳ್ಳುತ್ತಾರೆ. ಇಷ್ಟಲ್ಲದೆ ತಮ್ಮ ಚಿಕಿತ್ಸೆಗಾಗಿ ಎಲ್ಲಾ ಜಮೀನು ಹಾಗೂ ಹಣವನ್ನು ಕಳೆದುಕೊಂಡಿರುತ್ತಾರೆ. ಇಷ್ಟಾದರೂ ಸ್ವತಂತ್ರವಾಗಿ ನಡೆದಾಡಲು ಮಾತ್ರ ಸಾಧ್ಯವಾಗಲಿಲ್ಲ. ಹೀಗೇ ಇದ್ದರೆ ಬದುಕಲು ಸಾಧ್ಯವಿಲ್ಲ, ನನ್ನ ಕೈಲಾಗುವ ಯಾವುದಾದರೂ ಕೆಲಸ ಮಾಡಲೇ ಬೇಕು ಎಂದು ಛಲ ಇಟ್ಟುಕೊಂಡು ತಮಗೆ ತಿಳಿದಿರುವ ಕೃಷಿ ವೃತ್ತಿಯನ್ನೇ ಮುಂದುವರೆಸಿಕೊಂಡು ಹೋಗಲು ನಿರ್ಧರಿಸುತ್ತಾರೆ. ಆದ್ದರಿಂದ ಹೊಸ ಬದುಕು ರೂಪಿಸುವ ಸಲುವಾಗಿ ಕುಟುಂಬ ಸಮೇತರಾಗಿ ದಕ್ಷಿಣಕನ್ನಡದ ಬೆಳ್ತಂಗಡಿ ತಾಲೂಕಿನ ನೆರಿಯಕ್ಕೆ ವಲಸೆ ಬಂದು ಅಲ್ಲೇ ಸಾಲ ಮಾಡಿ 2 ಎಕರೆ ಜಮೀನು ಖರೀದಿ ಮಾಡಿ ಕಷ್ಟ ಪಟ್ಟು ದುಡಿದರು. ತಮ್ಮ ದೌರ್ಬಲ್ಯಗಳನ್ನೆಲ್ಲಾ ಬದಿಗೆ ಇಟ್ಟು ಅಚ್ಚು ಕಟ್ಟಾಗಿ ಕೆಲಸಗಳನ್ನು ತಾವೇ ಎಲ್ಲಾ ಕೆಲಸಗಳನ್ನು ಮಾಡುತ್ತ ಶ್ರಮದ ಕೆಲಸಗಳಿಗೆ ಮಾತ್ರ ಹೊರಗಿನವರನ್ನು ಕರೆಯುತ್ತಾರೆ. ಕೂಲಿ ಕೆಲಸಗಳನ್ನು ತಾವೇ ಹೊಲದಲ್ಲಿ ಮಾಡುತ್ತಾ ತಮ್ಮ ಜೀವನ ನಡೆಸಿಕೊಂಡು ಹೊಗುತ್ತಾ ಇರುತ್ತಾರೆ.

ಇಂತಹ ಸ್ಪೂರ್ತಿದಾಯಕ ವ್ಯಕ್ತಿಯು ಫೆಬ್ರವರಿ 2020 ರಲ್ಲಿ ಸೇವಾಧಾಮ ಪುನಶ್ಚೇತನ ಸಂಸ್ಥೆಯಲ್ಲಿ 15 ದಿನಗಳ ಕಾಲ ಪುನಶ್ಚೇತನ ಪಡೆದುಕೊಂಡರು. ತದನಂತರ ಸೇವಾಧಾಮದ ಜೀವನೋಪಾಯ ಯೋಜನೆಯಡಿ ಸ್ವಉದ್ಯೋಗಕ್ಕೆ ಪ್ರೋತ್ಸಾಹಿಸಲು ಅವರಿಗೆ ಜೇನುಕೃಷಿ ಮತ್ತು ಹೊಲಿಗೆಯಂತ್ರವನ್ನು ನೀಡಲಾಯಿತು. ಈಗ ಇವರು ಸ್ವಾವಲಂಬಿ ಜೀವನ ನಡೆಸುತ್ತಾ ಮಾಸಿಕವಾಗಿ ಅಂದಾಜು 10000 ದಷ್ಟು ದುಡಿಯುತ್ತಾರೆ.